**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.1.**

ಸಂಖ್ಯೆ. ಎಡಿಎಂ.2. ಸಮುದಾಯದತ್ತ ಶಾಲೆ.1. 2011-12 ದಿನಾಂಕ 21.9.2011.

**ಜ್ಞಾಪನ**

ವಿಷಯ:- 2011-12 ನೇ ಸಾಲಿನ ಮೊದಲನೇ ಸಮುದಾಯದತ್ತ ಶಾಲೆ ಕಾರ್ಯಕ್ರಮವನ್ನು ನಡೆಸುವ ಬಗ್ಗೆ.

------

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾರ್ಗದರ್ಶಿಯಲ್ಲಿ ಸೂಚಿಸಿರುವಂತೆ ಹಾಗು ಜುಲೈ 2011 ರ ತಿಂಗಳಲ್ಲಿ ನಡೆದ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಮಾವೇಶದಲ್ಲಿ ತಿಳಿಸಿದ ಪ್ರಕಾರ ಸಮುದಾಯದತ್ತ ಶಾಲಾ ಕಾರ್ಯಕ್ರಮ ಕಳೆದ ಕೆಲವು ವರ್ಷಗಳಲ್ಲಿ ಅನೂನುಚಾನವಾಗಿ ನಡೆಯುತ್ತಾ ಬಂದಿದೆ. ಸದರಿ ಕಾರ್ಯಕ್ರಮವನ್ನು ನಡೆಸುವಂತೆ ಸೂಚನೆಯನ್ನು ಉಲ್ಲೇಖದ ಪತ್ರದಲ್ಲಿ ಸೂಚಿಸಿರುವ ಸಂದರ್ಭದಲ್ಲಿ ನಿಮಗೆ ಈಗಾಗಲೇ ತಿಳಿಸಲಾಗಿದೆ. ಸದರಿ ಕಾರ್ಯಕ್ರಮವು ಸರಿಯಾಗಿ ನಡೆಯುತ್ತಿಲ್ಲವೆಂಬುದಾಗಿ ಹಿರಿಯ ಅಧಿಕಾರಿಗಳು ಗಮನಿಸಿರುತ್ತಾರೆ. ಈ ಕಾರ್ಯಕ್ರಮವು ಕ್ರಿಯಾತ್ಮಕವಾಗಿ ಮತ್ತು ವ್ಯವಸ್ಥಿತವಾಗಿ ನಡೆಯಬೇಕೆಂಬ ಸೂಚನೆಯನ್ನು ನೀಡಲಾಗಿದೆ.

1. **ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನಾಂಕಗಳು:**

| | | |
|---|---|---|
| 1. | **ಪ್ರಾಥಮಿಕ ಶಾಲೆ** | **ದಿನಾಂಕ 30.09.2011** |
| 2. | **ಪ್ರೌಢ ಶಾಲೆ** | **ದಿನಾಂಕ 01.10.2011** |

2 **ಸಮುದಾಯದತ್ತ ಶಾಲಾ ಕಾರ್ಯಕ್ರಮ ಶಾಲಾ ಹಂತದಲ್ಲಿ ನಡೆಯಬೇಕಾದ ಸ್ವರೂಪ:**

ಶಾಲಾ ಹಂತದಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮವು ಈ ಮುಂದಿನಂತೆ ವ್ಯವಸ್ಥೆಗೊಳಿಸತಕ್ಕದ್ದು:

✓ ಎಸ್.ಡಿ.ಎಮ್.ಸಿ. ಸದಸ್ಯರಿಗೆ ಮತ್ತು ಎಲ್ಲಾ ಪೋಷಕರು ಸಮುದಾಯದತ್ತ ಶಾಲಾ ಕಾರ್ಯಕ್ರಮ ಕುರಿತು ಸೂಚನೆಯನ್ನು ಮುಂಗಡವಾಗಿ ನೀಡುವುದು. ಹಾಗು ಇತರೆ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವುದು.

✓ ಶಾಲಾ ಆವರಣ ಮತ್ತು / ಪರಿಸರವನ್ನು ಸ್ವಚ್ಛಗೊಳಿಸುವುದು ಮತ್ತು ಅಲಂಕರಿಸುವುದು.

✓ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯನ್ನು ಎಲ್ಲಾ ಅಧ್ಯಾಪಕರು ಮಾಪನ ತಮ್ಮ ವಿಷಯಗಳಲ್ಲಿ ಮಾಡಬೇಕು. ಘಟಕ ಪರೀಕ್ಷೆ, ಕಿರು ಪರೀಕ್ಷೆ / ಮೊದಲನೇ ಸೆಮಿಸ್ಟರ್ / ಅರ್ಧ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿ ಗಳಿಸಿರುವ ಕಲಿಕಾ ಪ್ರಗತಿಯನ್ನು ಸ್ಪಷ್ಟವಾಗಿ ಗುರುತು ಮಾಡಿಕೊಂಡಿರಬೇಕು. ಈ ಮಾಹಿತಿಯನ್ನು ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನದಂದು ಪೋಷಕರೊಂದಿಗೆ ವಿನಿಮಯ ಮಾಡಿಕೊಳ್ಳುವುದು

✓ ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನಗಳಲ್ಲಿ ಎಸ್.ಡಿ.ಎಮ್.ಸಿ. ಸಭೆಯನ್ನು ಶಾಲಾ ಪ್ರಾರ್ಥನೆ ಬಳಿಕ ಅರ್ಧ ಗಂಟೆ ಕಾಲ ನಡೆಸಬೇಕು. ಶಾಲೆಯಲ್ಲಿ ಗೈರು ಹಾಜರಾಗುತ್ತಿರುವ ಮಕ್ಕಳ ವಿವರ, ಶಾಲೆಚುಲ್ಲಿ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯ ಸ್ಥೂಲನೋಟ, ಶಾಲಯಲ್ಲಿ ಕಂಡು ಬರುವ ಕೊರತೆಗಳು, ಇತ್ಯಾದಿ ಸಂಗತಿಗಳ ಕುರಿತು ಚರ್ಚೆ ನಡೆಸಿ ದಾಖಲಿಸಬೇಕು.

✓ ತರಗತಿ ಕೋಣೆಯಲ್ಲಿ ಪೋಷಕರನ್ನು ಕರೆದು ಕೂಡಿಸಿ, ತಮ್ಮ ಮಕ್ಕಳ ಕಲಿಕೆಯ ಪ್ರಗತಿ ಕುರಿತು ವೈಯಕ್ತಿಕವಾಗಿ ಪೋಷಕರೊಂದಿಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವುದು. ಈ ಕ್ರಮದಿಂದ ಮಕ್ಕಳ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗದಂತೆ ಅಧ್ಯಾಪಕರು ಎಚ್ಚರವಹಿಸುವಂತೆ ಸೂಚನೆ ನೀಡಬೇಕು. ತರಗತಿವಾರು ಮಾಹಿತಿ ವಿನಿಮಯ ಮಾಡಬೇಕಾದ ಕ್ರಮವನ್ನು ಮುಂದಿನಂತೆ ನೀಡಲಾಗಿದೆ:

| ಕ್ರಮ ಸಂಖ್ಯೆ | ಸಮಯ | ಪ್ರಾಥಮಿಕ ಶಾಲೆ | ಪ್ರೌಢ ಶಾಲೆ |
|---|---|---|---|
| 1. | 10.30 ರಿಂದ 11.30 ರವರೆಗೆ | 1 ಮತ್ತು 2 ನೇ ತರಗತಿ | 8 ನೇ ತರಗತಿ |
| 2. | 11.30 ರಿಂದ 12.30 ರವರೆಗೆ | 3 ಮತ್ತು 4 ನೇ ತರಗತಿ | 9 ನೇ ತರಗತಿ |
| 3. | 12.30 ರಿಂದ 1.30 ರವರೆಗೆ | 5 ಮತ್ತು 6 ನೇ ತರಗತಿ | 10 ನೇ ತರಗತಿ |
| 4. | 1.30 ರಿಂದ 2.30 ರವರೆಗೆ | ಮಧ್ಯಾಹ್ನದ ಉಪಹಾರ | |
| 5. | 2.30 ರಿಂದ 3.30 ರವರೆಗೆ | 7 ನೇ ತರಗತಿ | |
| 6. | 3.30 ರಿಂದ 4.30 ರವರೆಗೆ | ಸಾಂಸ್ಕೃತಿಕ ಕಾರ್ಯಕ್ರಮ | |
| 7. | 4.30 ರಿಂದ 5.25 ರವರೆಗೆ | ಎಸ್.ಡಿ.ಎಮ್.ಸಿ.ರವರೊಂದಿಗೆ ಗೈರು ಹಾಜರಾಗುತ್ತಿರುವವಿದ್ಯಾರ್ಥಿ/ವಿದ್ಯಾರ್ಥಿನಿಯರ ಮನೆಗಳಿಗೆ ಎಸ್.ಡಿ.ಎಮ್.ಸಿ. ಮತ್ತು ಇತರ ಶಿಕ್ಷಣಾಸಕ್ತರೊಂದಿಗೆ ಭೇಟಿ ನೀಡುವುದು. | |

3) ಬ್ಲಾಕ್ ಹಂತದಲ್ಲಿ ನಿರ್ವಹಿಸಬೇಕಾದ ಕಾರ್ಯಗಳು:-

✓ ದಿನಾಂಕ 28.9.2011ರೊಳಗೆ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರ ಸಭೆಯನ್ನು ನಡೆಸಿ ಸಮುದಾಯದತ್ತ ಶಾಲಾ ಕಾರ್ಯಕ್ರಮವನ್ನು ನಡೆಸುವ ಕುರಿತು ವಿವರವಾಗಿ ಚರ್ಚಿಸಿ ಮಾಹಿತಿ ನೀಡುವುದು.

✓ ಸ್ಥಳೀಯ ಮಾಧ್ಯಮಗಳಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮ ಕುರಿತಂತೆ ವ್ಯಾಪಕ ಪ್ರಚಾರವನ್ನು ಸುದ್ದಿಯಾಗಿ ಮತ್ತು ಲೇಖನ ಬರೆಯುವ ಮೂಲಕ ನೀಡುವುದು ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಬ್ಯಾನರ್‌ಗಳನ್ನು ಬರೆದು ಕಟ್ಟಿಸುವುದು.

✓ ನಿಮ್ಮಲ್ಲಿ ಇರುವ ಉಸ್ತುವಾರಿ ಅಧಿಕಾರಿಗಳಾದ ಸಿ.ಆರ್.ಪಿ, ಬಿ.ಆರ್.ಪಿ. ಇಸಿಓ, ಬಿಆರ್‌ಸಿ ಮತ್ತು ಪ್ರೌಢಶಾಲೆಯ ಮುಖ್ಯ ಶಿಕ್ಷಕರನ್ನು ಪ್ರತಿ 10 ಶಾಲೆಗೆ ನೋಡಲ್ ಅಧಿಕಾರಿಯಾಗಿ ನೇಮಿಸುವುದು. ಸದರಿ ನೋಡಲ್ ಅಧಿಕಾರಿಗಳು ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನದಂದು ತಮ್ಮ ಕ್ಷೇತ್ರದಲ್ಲಿ ಪ್ರವಾಸ ಮಾಡಿ ವಸ್ತುಸ್ಥಿತಿಯನ್ನು ಗಮನಿಸಿ ಸದರಿ ಕಾರ್ಯಕ್ರಮ ನಡೆದ ಮಾರನೇ ದಿವಸ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ಒಪ್ಪಿಸುವಂತೆ ವ್ಯವಸ್ಥೆಗೊಳಿಸುವುದು. ಇದಕ್ಕಾಗಿ ಲಗತ್ತಿಕೆಯಲ್ಲಿ ನಮೂನೆಯನ್ನು ಬಳಸುವುದು.

✓ ಪ್ರತಿ ಒಂದು ಅಥವಾ 2 ಶಾಲೆಗೆ ಒಬ್ಬರಂತೆ ಪ್ರೌಢಶಾಲಾ ಅಧ್ಯಾಪಕರನ್ನು ವೀಕ್ಷಕರನ್ನಾಗಿ ನೇಮಿಸುವುದು. ಇವರು ನಿರ್ವಹಿಸಬೇಕಾದ ಕಾರ್ಯದ ಕುರಿತು ಮೇಲೆ ಸೂಚಿಸಿರುವ ನೋಡಲ್ ಅಧಿಕಾರಿಗಳು ಮಾಹಿತಿಯನ್ನು ನೀಡಿ ಸರಿಯಾದ ಮಾರ್ಗದರ್ಶನವನ್ನು ನೀಡತಕ್ಕದ್ದು.

✓ ಈ ಬಾರಿ ಪ್ರಗತಿ ಪತ್ರಗಳು ತಲುಪುವ ಸಾಧ್ಯತೆ ಕಡಿಮೆ ಇರುವುದರಿಂದ ಅಧ್ಯಾಪಕರು ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಪೋಷಕರಿಗೆ ತಿಳಿಸುವ ಸಲುವಾಗಿ ಮಾಹಿತಿಯನ್ನು ಸಿದ್ಧಪಡಿಸಿ ಇಟ್ಟುಕೊಳ್ಳುವುದು.

4) ಜಿಲ್ಲಾ ಹಂತದ ಅಧಿಕಾರಿಗಳು ನಿರ್ವಹಿಸಬೇಕಾದ ಕಾರ್ಯಗಳು:-

✓ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ, ಡಯಟ್ ಪ್ರಾಂಶುಪಾಲರು, ಡಯಟ್ ನೋಡಲ್ ಅಧಿಕಾರಿಗಳ ಸಭೆಯನ್ನು ದಿನಾಂಕ 24.9.2011ರಂದು ನಡೆಸುವುದು ಹಾಗೂ ಯುಕ್ತ ಮಾರ್ಗದರ್ಶನ ನೀಡುವುದು. (ಉಪನಿರ್ದೇಶಕರು (ಆಡಳಿತ)

✓ ತಾಲ್ಲೂಕು ನೋಡಲ್ ಅಧಿಕಾರಿಗಳನ್ನು ನೇಮಿಸುವುದು ಹಾಗೂ ಅವರ ವಿವರವನ್ನು ಈ ಕಛೇರಿಯ ಶ್ರೀ ಜೋಸೆಫ್, ಸಹನಿರ್ದೇಶಕರು (ಶಾಲಾ ಶಿಕ್ಷಣ) ಇವರಿಗೆ ಕೂಡಲೇ ಇ ಮೇಲ್ ಮೂಲಕ ಕಳುಹಿಸುವುದು.

✓ ಸದರಿ ನೋಡಲ್ ಅಧಿಕಾರಿಗಳು ಕಾರ್ಯಕ್ರಮದ ದಿನದಂದು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಭೇಟಿ ಕೊಟ್ಟು ಒಟ್ಟಾರೇ ಸಮುದಾಯದತ್ತ ಶಾಲೆಯ ಚಿತ್ರಣವನ್ನು ಉಪನಿರ್ದೇಶಕರು (ಆಡಳಿತ / ಅಭಿವೃದ್ಧಿ) ಇಬ್ಬರಿಗೂ ನೀಡುವುದು.

✓ ಕಾರ್ಯಕ್ರಮ ಮುಗಿದ 2 ದಿನದೊಳಗೆ ಈ ಪತ್ರದ ಜೊತೆಗೆ ಲಗತ್ತಿಸಿರುವ ನಮೂನೆಯಲ್ಲೇ ಮಾಹಿತಿಯನ್ನು ಒದಗಿಸತಕ್ಕದ್ದು

✓ ತಾಲ್ಲೂಕು ನೋಡಲ್ ಅಧಿಕಾರಿಗಳು ತಾಲ್ಲೂಕಿನಲ್ಲಿ ನಡೆಯುವ ಸಭೆಗೆ ಹಾಜರಾಗಿ, ಮಾರ್ಗದರ್ಶನ ನೀಡುವುದು.

✓ ಜಿಲ್ಲಾ ಹಂತದಲ್ಲಿ ನಡೆಯುವ ಸಭೆಗೆ ರಾಜ್ಯ ಹಂತದ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ತಪ್ಪದೇ ಕರೆಯುವುದು.

ಮೇಲಿನ ಕಾರ್ಯಕ್ರಮದ ಹಂದರವು ಒಂದು ಸ್ಥೂಲವಾದ ರೂಪುರೇಷೆಯಾಗಿದೆ. ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಮತ್ತು ಕಾರ್ಯಕ್ರಮದ ಆಶಯಕ್ಕೆ ಭಂಗ ಬಾರದ ರೀತಿಯಲ್ಲಿ ಕೆಲವು ಅಂಶಗಳನ್ನು ಸೇರಿಸಿಕೊಳ್ಳಬಹುದು ಹಾಗೂ ತನ್ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

( ಮಾನ್ಯ ಆಯುಕ್ತರ ಸೂಚನೆಯ ಮೇರೆಗೆ )

ನಿರ್ದೇಶಕರು
(ಪ್ರಾಥಮಿಕ ಶಿಕ್ಷಣ)

21-09-11
ನಿರ್ದೇಶಕರು
(ಪ್ರೌಢ ಶಿಕ್ಷಣ)

ಇವರಿಗೆ,

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಗುಲ್ಬರ್ಗಾ
2) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
3) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರುಗಳಿಗೆ
4) ರಾಜ್ಯದಲ್ಲಿನ ಸಿ.ಟಿ.ಇ ಪ್ರಾಂಶುಪಾಲರುಗಳಿಗೆ
5) ರಾಜ್ಯದಲ್ಲಿನ ಎಲ್ಲಾ ಉಪನಿರ್ದೇಶಕರುಗಳು ಆಡಳಿತ / ಅಭಿವೃದ್ಧಿ
6) ರಾಜ್ಯದಲ್ಲಿನ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ಮಾಹಿತಿಗಾಗಿ ಸಲ್ಲಿಸಿದೆ.

1) ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ, ಬೆಂಗಳೂರು.
2) ರಾಷ್ಟ್ರೀಯ ಮಾಧ್ಯಮಿಕ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ
3) ಶಿಕ್ಷಣ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬೆಂಗಳೂರು.

G:\samudaya.doc

**ರಾಜ್ಯ ಹಂತದ ಜಿಲ್ಲಾ ನೋಡಲ್ ಅಧಿಕಾರಿಗಳ ಹುದ್ದೆ ಹಾಗೂ ವೀಕ್ಷಿಸಬೇಕಾದ ಜಿಲ್ಲೆಗಳು**
**(ಸಮುದಾಯದತ್ತ ಶಾಲೆ ಕಾರ್ಯಕ್ರಮಕ್ಕೆ ಮಾತ್ರ)**

| ಕ್ರಂ.ಸಂ. | ಹುದ್ದೆ | ಜಿಲ್ಲೆ |
|---|---|---|
| 1 | ನಿರ್ದೇಶಕರು (ಪರೀಕ್ಷೆಗಳು) | ಶಿವಮೊಗ್ಗ |
| 2 | ಸಹನಿರ್ದೇಶಕರು, ಪರೀಕ್ಷಾ ಮಂಡಳಿ | ದಾವಣಗೆರೆ |
| 3 | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ | ಚಿಕ್ಕಮಗಳೂರು |
| 4 | ನಿರ್ದೇಶಕರು, ಪ್ರಾಥಮಿಕ ಶಿಕ್ಷಣ | ಚಾಮರಾಜನಗರ |
| 5 | ನಿರ್ದೇಶಕರು, ಪ್ರೌಢ ಶಿಕ್ಷಣ | ಹಾಸನ |
| 6 | ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕ ಸೊಸೈಟಿ. | ಕೋಲಾರ |
| 7 | ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ | ಮಂಡ್ಯ |
| 8 | ನಿರ್ದೇಶಕರು, ಆರ್.ಎಂ.ಎಸ್.ಎ | ಮಧುಗಿರಿ |
| 9 | ಸಹನಿರ್ದೇಶಕರು, ಆರ್.ಎಂ.ಎಸ್.ಎ | ಕೊಡಗು |
| 10 | ಸಹನಿರ್ದೇಶಕರು, ಎಸ್.ಎಸ್.ಎ (ಆಡಳಿತ) | ಮೈಸೂರು |
| 11 | ಸಹನಿರ್ದೇಶಕರು, ಎಸ್.ಎಸ್.ಎ (ಕಾರ್ಯಕ್ರಮಗಳು) | ದಕ್ಷಿಣ ಕನ್ನಡ |
| 12 | ಸಹನಿರ್ದೇಶಕರು, ಎಸ್.ಎಸ್.ಎ (ಕ್ವಾಲಿಟಿ) | ಚಿಕ್ಕಬಳ್ಳಾಪುರ |
| 13 | ಸಹನಿರ್ದೇಶಕರು, ಮೈಸೂರು | ಉಡುಪಿ |
| 14 | ಸಹನಿರ್ದೇಶಕರು, ಬೆಂಗಳೂರು | ತುಮಕೂರು |
| 15 | ಸಹನಿರ್ದೇಶಕರು, ಶಾಲಾ ಶಿಕ್ಷಣ | ಬೆಂಗಳೂರು, ಉತ್ತರ ಮತ್ತು ದಕ್ಷಿಣ |
| 16 | ಉಪನಿರ್ದೇಶಕರು, ಕಾನೂನು ಶಾಖೆ | ಚಿತ್ರದುರ್ಗ |
| 17 | ಉಪನಿರ್ದೇಶಕರು, ಪ್ರೌಢ ಶಿಕ್ಷಣ | ಬೆಂ. ಗ್ರಾಮಾಂತರ |
| 18 | ಉಪನಿರ್ದೇಶಕರು, ಯೋಜನೆ | ರಾಮನಗರ |
| 19 | ಸಹನಿರ್ದೇಶಕರು, ಮ.ಉ.ಯೋ | ಹಾವೇರಿ |
| 20 | ನಿರ್ದೇಶಕರು, ಧಾರವಾಡ | ಉತ್ತರ ಕನ್ನಡ, ಶಿರಸಿ |
| 21 | ಸಹನಿರ್ದೇಶಕರು, ಆಯುಕ್ತರ ಕಚೇರಿ, ಧಾರವಾಡ | ಗದಗ್ |
| 22 | ಸಹನಿರ್ದೇಶಕರು, ಬೆಳಗಾವಿ | ಬಿಜಾಪುರ |
| 23 | ಪ್ರಾಂಶುಪಾಲರು, ಸಿಟಿಇ, ಬೆಳಗಾವಿ | ಬಾಗಲಕೋಟೆ |
| 24 | ಪ್ರಾಂಶುಪಾಲರು, ಸಿಟಿಇ, ಜಮಖಂಡಿ | ಬೆಳಗಾವಿ, ಚಿಕ್ಕೋಡಿ |
| 25 | ಪ್ರಾಂಶುಪಾಲರು, ಸಿಟಿಇ, ಚಿತ್ರದುರ್ಗ | ಬಳ್ಳಾರಿ |
| 26 | ಪ್ರಾಂಶುಪಾಲರು, ಸಿಟಿಇ, ಗುಲ್ಬರ್ಗಾ | ರಾಯಚೂರು |
| 27 | ಅಪರ ಆಯುಕ್ತರು, ಗುಲ್ಬರ್ಗಾ | ಗುಲ್ಬರ್ಗಾ |
| 28 | ಸಹನಿರ್ದೇಶಕರು, ಆಯುಕ್ತಾಲಯ, ಗುಲ್ಬರ್ಗಾ | ಬೀದರ್ |
| 29 | ನಿರ್ದೇಶಕರು, ಅಪರ ಆಯುಕ್ತಾಲಯ, ಗುಲ್ಬರ್ಗಾ | ಯಾದಗೀರ್ |
| 30 | ಅಪರ ಆಯುಕ್ತರು, ಧಾರವಾಡ | ಧಾರವಾಡ |
| 31 | ಪ್ರಾಂಶುಪಾಲರು, ಸಿಟಿಇ, ಮೈಸೂರು | ಕೊಪ್ಪಳ |

ವಿ.ಸೂ : ಸದರಿ ನೋಡಲ್ ಅಧಿಕಾರಿಗಳು ದಿನಾಂಕ : 26.09.2011ರೊಳಗೆ ಜಿಲ್ಲಾ ಹಂತದಲ್ಲಿ ಸಭೆ ನಡೆಸಿ ಮಾರ್ಗದರ್ಶನ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸುವುದು ಹಾಗೂ ಕಾರ್ಯಕ್ರಮದ ದಿನಗಳಂದು ಆಯಾ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವುದು.

ಸಮುದಾಯದತ್ತ ಶಾಲಾ ಕಾರ್ಯಕ್ರಮ ಕುರಿತಂತೆ ಉಪನಿರ್ದೇಶಕರು ಆಡಳಿತ ಇವರು ಸಲ್ಲಿಸಬೇಕಾದ ವರದಿ.

| ಕ್ರ.ಸಂ | ವಿವರ | ಪ್ರಾಥಮಿಕ | ಪ್ರೌಢ |
|---|---|---|---|
| 1 | ಜಿಲ್ಲೆಯಲ್ಲಿರುವ ಸರ್ಕಾರಿ ಶಾಲೆಗಳು | | |
| 2 | ಬಿ.ಇ.ಓ, ಬಿಆರ್.ಸಿ ಮತ್ತು ತಾಲ್ಲೂಕಿನ ನೋಡಲ್ ಅಧಿಕಾರಿಗಳ ಸಭೆಯನ್ನು ನಡೆಸಿದ ದಿನಾಂಕ | | |
| 3 | ನೋಡಲ್ ಅಧಿಕಾರಿಗಳಿಗೆ ತಾಲ್ಲೂಕು / ಬ್ಲಾಕ್‌ಗಳನ್ನು ಹಂಚಿಕೆ ಮಾಡಿದ ದಿನಾಂಕ | | |
| 4 | ನೇಮಕ ಮಾಡಿದ ತಾಲ್ಲೂಕು ನೋಡಲ್ ಅಧಿಕಾರಿಗಳ ಸಂಖ್ಯೆ | | |
| 5 | ತಾಲ್ಲೂಕು ನೋಡಲ್ ಅಧಿಕಾರಿಗಳು ಭೇಟಿ ನೀಡಿದ ಶಾಲೆಗಳ ಸಂಖ್ಯೆ | | |
| 6 | ತಾಲ್ಲೂಕು ನೋಡಲ್ ಅಧಿಕಾರಿಗಳು ಭೇಟಿ ಶಾಲೆಗಳ ಪೈಕಿ ಕಾರ್ಯಕ್ರಮ ಉತ್ತಮವಾಗಿ ನಡೆಯುತ್ತಿದ್ದ ಶಾಲೆಗಳ ಸಂಖ್ಯೆ | | |
| 7 | ತಾಲ್ಲೂಕು ನೋಡಲ್ ಅಧಿಕಾರಿಗಳು ಭೇಟಿ ನೀಡಿದ ಶಾಲೆ ಪೈಕಿ ಕಾರ್ಯಕ್ರಮ ಸಾಧಾರಣವಾಗಿ ನಡೆಯುತ್ತಿದ್ದ ಶಾಲೆಗಳ ಸಂಖ್ಯೆ | | |
| 8 | ತಾಲ್ಲೂಕು ನೋಡಲ್ ಅಧಿಕಾರಿಗಳು ತಮ್ಮ ಪ್ರವಾಸದ ವೇಳೆ ಗಮನಿಸಿದ 5 ಉಲ್ಲೇಖನೀಯ ಸಂಗತಿಗಳು. | | |
| 9 | ತಾಲ್ಲೂಕು / ಬ್ಲಾಕ್‌ನಲ್ಲಿ ಮುಖ್ಯ ಶಿಕ್ಷಕರು ಸಭೆ ನಡೆಸಿದ ದಿನಾಂಕ | | |
| 10 | ತಾಲ್ಲೂಕು / ಬ್ಲಾಕ್‌ನಲ್ಲಿ 10 ಶಾಲೆಗಳಿಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿದವರ ಸಂಖ್ಯೆ ಹಾಗೂ ದಿನಾಂಕ | | |
| 11 | ಶಾಲೆಗಳಿಗೆ ಎಷ್ಟು ವೀಕ್ಷಕರನ್ನು ನೇಮಿಸಲಾಯಿತು | | |
| 12 | ಬ್ಲಾಕ್ ಶಿಕ್ಷಣಾಧಿಕಾರಿಗಳು ನೀಡಿರುವ ವರದಿಯಂತೆ 10 ಉಲ್ಲೇಖನೀಯ ಸಂಗತಿಗಳು | | |
| 13 | ವೀಕ್ಷಕರು / 10 ಶಾಲೆಗಳ ನೋಡಲ್ ಅಧಿಕಾರಿಗಳು ತಮ್ಮ ಪ್ರವಾಸದ ವೇಳೆಯಲ್ಲಿ ಕಂಡುಕೊಂಡಂತೆ ಸುತ್ತೋಲೆಯಲ್ಲಿ ತಿಳಿಸಿರುವ ಸಂಗತಿಗಳನ್ನು ಯಥಾವತ್ತಾಗಿ ಅನುಸರಿಸಿದ ಶಾಲೆಗಳ ಸಂಖ್ಯೆ | | |

| | | | |
|---|---|---|---|
| 14 | ವೀಕ್ಷಕರು / 10 ಶಾಲೆಗಳ ನೋಡಲ್ ಅಧಿಕಾರಿಗಳು ತಮ್ಮ ಪ್ರವಾಸದ ವೇಳೆಯಲ್ಲಿ ಕಂಡುಕೊಂಡಂತೆ ಸುತ್ತೋಲೆಯಲ್ಲಿ ತಿಳಿಸಿರುವ ಸಂಗತಿಗಳನ್ನು ಯಥಾವತ್ತಾಗಿ ಅನುಸರಿಸದಿರುವ ಶಾಲೆಗಳ ಸಂಖ್ಯೆ | | |
| 15 | ಯಾವ ಸಂಗತಿಗಳನ್ನು ಶಾಲೆಗಳು ಅನುಸರಿಸಲು ವಿವರಿಸಲಾಗಿದೆ? | | |
| 16 | ಪೋಷಕರ ಜೊತೆ ಎಷ್ಟು ಶಾಲೆಗಳು ಸೂಕ್ತವಾಗಿ ಪ್ರತಿಕ್ರಿಯೆ ನಡೆಸಿದವು. | | |
| 17 | ಎಷ್ಟು ಶಾಲೆಗಳು ಶಿಕ್ಷಣದ ಗುಣಮಟ್ಟ ಕುರಿತು ಸೂಕ್ತವಾಗಿ ವಿಚಾರ ವಿನಿಮಯ ನಡೆಸಿದವು | | |
| 18 | ಎಷ್ಟು ಶಾಲೆಗಳು ಶಾಲಾ ಸೌಲಭ್ಯ ಕುರಿತು ವಿಚಾರ ವಿನಿಮಯ ನಡೆಸಿದವು | | |
| 19 | ಎಷ್ಟು ಶಾಲೆಗಳು ಗೈರು ಹಾಜರಾದ ಮಕ್ಕಳ ಮನೆಗೆ ತೆರಳಿ ಆಪ್ತ ಸಮಾಲೋಚನೆ ನಡೆಸಿದವು | | |
| 20 | ಜೂನ್ ಬಿ ಗ್ರೇಡ್‌ನಲ್ಲಿದ್ದ ಎಷ್ಟು ಮಕ್ಕಳು ಸೆಪ್ಟಂಬರ್ ಹಂತಕ್ಕೆ ಎ ಗ್ರೇಡ್‌ಗೆ ಬಂದರು (ತರಗತಿವಾರು) | | |
| | | | |

# ಮಾರ್ಗದರ್ಶಕರ ವರದಿ ನಮೂನೆ

## ಸಮುದಾಯದತ್ತ ಶಾಲೆ ಕಾರ್ಯಕ್ರಮ 2011-12

| | | | | |
|---|---|---|---|---|
| 1 | ಶಾಲೆಯ ಹೆಸರು ಮತ್ತು ವಿಳಾಸ | | | |
| 2 | ಕಾರ್ಯಕ್ರಮದ ದಿನಾಂಕ, | | | |
| 3 | ಭಾಗವಹಿಸಿದ ಮಾರ್ಗದರ್ಶಕರು/ ಅಧಿಕಾರಿಗಳ ಹೆಸರು ಮತ್ತು ಪದನಾಮ | | | |
| 4 | ಹಿಂದೆ ನಡೆದ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ದಾಖಲಿಸಲಾದ ವರದಿ / ನಡಾವಳಿ ಮೇಲೆ ಕೈಗೊಂಡ ಕ್ರಮ | | | |
| 5 | ಜೂನ್‌ನಲ್ಲಿ ‘ಬಿ’ ಗ್ರೇಡ್‌ನಲ್ಲಿದ್ದು ಸೆಪ್ಟೆಂಬರ್ ಅಂತ್ಯಕ್ಕೆ “ಎ” ಗ್ರೇಡ್‌ಗೆ ಬಂದ ಮಕ್ಕಳ ವಿವರ | ತರಗತಿ | ಜೂನ್‌ನಲ್ಲಿದ್ದ ಬಿ ಗ್ರೇಡ್ ಮಕ್ಕಳ ಸಂಖ್ಯೆ | ಸೆಪ್ಟಂಬರ್ ಅಂತ್ಯಕ್ಕೆ ಬಿ ಗ್ರೇಡ್ ನಿಂದ ಎ ಗ್ರೇಡ್ ಗೆ ಬಂದ ಮಕ್ಕಳ ಸಂಖ್ಯೆ |
| | | 1 | | |
| | | 2 | | |
| | | 3 | | |
| | | 4 | | |
| | | 5 | | |
| | | 6 | | |
| | | 7 | | |
| | | 8 | | |
| | | 9 | | |
| | | 10 | | |
| 6 | **ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪಾತ್ರ**<br>ಅ. ಸಮಿತಿ ಸದಸ್ಯರೆಲ್ಲರೂ ಕಾರ್ಯಕ್ರಮ ದಲ್ಲಿ ಭಾಗವಹಿಸಿದ್ದಾರಾ? | | | |
| | ಆ. ಇಲ್ಲವಾದಲ್ಲಿ ಕಾರಣಗಳೇನು? | | | |
| | ಇ. ಸಮಿತಿಯ ಸಭೆಯಲ್ಲಿ ಚರ್ಚೆಯಾದ ಮುಖ್ಯ ವಿಷಯಗಳು ಯಾವುವು | | | |
| | ಈ. ಸಮಿತಿ ಸಭೆಯಲ್ಲಿ ಪರಿಹಾರವಾದ ಸಮಸ್ಯಗಳು ಯಾವುವು | | | |
| | ಉ. ಸಮಿತಿ ಸಭೆಯಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳು ಯಾವುವು? | | | |
| 7 | **ಮಕ್ಕಳ ಪ್ರಗತಿ ಕುರಿತು ಪೋಷಕರೊಡನೆ ನಡೆಸಿದ ಸಮಾಲೋಚನೆ’**<br>ಅ. ಮಕ್ಕಳ ಪ್ರಗತಿ ಪತ್ರ, ಉತ್ತರ ಪತ್ರಿಕೆ ಹಾಗೂ ವಿದ್ಯಾರ್ಥಿ ಡೈರಿಯನ್ನು ಪೋಷಕರಿಗೆ ನೀಡಿ ಮಕ್ಕಳ ಕಲಿಕೆಯ ಪ್ರಗತಿ ಬಗ್ಗೆ ಸಮಾಲೋಚಿಸಲಾಗಿದೆಯೆ? | | | |

| | | |
|---|---|---|
| | ಆ. ಉತ್ತರ ಪತ್ರಿಕೆ ಹಾಗೂ ವಿದ್ಯಾರ್ಥಿ ಡೈರಿಯ ಬಗ್ಗೆ ಪೋಷಕರ ಅಭಿಪ್ರಾಯ ಏನು? | |
| | ಇ. ಈ ಮೇಲಿನ ದಾಖಲೆಗಳನ್ನು ಶಿಕ್ಷಕರು ಯಾವ ರೀತಿಯಲ್ಲಿ ನಿರ್ವಹಿಸಿದ್ದಾರೆ? | |
| 8 | **ದಾಖಲಾತಿ ಮತ್ತು ಹಾಜರಾತಿ**<br>ಅ. ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಎಷ್ಟು? ಶಾಲೆಯಿಂದ ಹೊರಗುಳಿಯಲು ಕಾರಣ | |
| | ಆ. ಎಷ್ಟು ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲಾಯಿತು | |
| | ಇ. ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳಿಗೆ ಕಲಿಕಾ ಕೇಂದ್ರಕ್ಕೆ ಸೇರಿಸಲು ವ್ಯವಸ್ಥೆ ಮಾಡಲಾಗಿದೆಯೆ? ಎಷ್ಟು ಮಕ್ಕಳನ್ನು ಸೇರಿಸಿದ್ದಾರೆ. | |
| | ಈ. ಶೇಕಡಾ 80ಕ್ಕಿಂತಲೂ ಹಾಜರಾತಿ ಕಡಿಮೆ ಇರುವ ಮಕ್ಕಳ ಸಂಖ್ಯೆ ಎಷ್ಟು? | |
| | ಉ. ಎಷ್ಟು ಪೋಷಕರನ್ನು ಕರೆಸಿ ಸಮಾಲೋಚನೆ ಮಾಡಲಾಗಿದೆ? | |
| | ಊ. ಗೈರುಹಾಜರಿ ಪ್ರಮಾಣವನ್ನು ಕಡಿಮ ಮಾಡಲು ಯಾವ ಕ್ರಮಗಳನ್ನು ಕೈಗೊಂಡಿದೆ? | |
| 9 | **ಮಕ್ಕಳ ಕಲಿಕಾ ಪ್ರದರ್ಶನ ಕುರಿತು ವಿವರ**<br>ಅ. ಕಲಿಕಾ ಪ್ರದರ್ಶನದಲ್ಲಿ /ನೀಡಿದ ಅಥವಾ ವಿದ್ಯಾರ್ಥಿಯೊಂದಿಗೆ ಸಂವಹಿಸಿದ ಕಾರ್ಯಕ್ರಮದ ವಿವರ | |
| | ಆ. ಪಠ್ಯಕ್ರಮ ಆಧರಿಸಿ ರೂಪಿಸಿದ ಕಾರ್ಯಕ್ರಮಗಳು ಯಾವುವು | |
| 10 | ಸಹಪಠ್ಯ ಚಟುವಟಿಕೆಗಳು<br>ಅ. ಯಾವ ಯಾವ ಸಹಪಠ್ಯ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ? ಮಕ್ಕಳ ಭಾಗವಹಿಸುವಿಕೆ ಹೇಗಿದೆ? | |
| | ಆ. ಸಹಪಠ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ಇದೆಯೆ? ಇದ್ದಲ್ಲಿ ಯಾವ ರೀತಿಯಲ್ಲಿ ಪ್ರೋತ್ಸಾಹಿಸಿರುತ್ತಾರೆ. | |
| 11 | ಶಾಲೆಯಲ್ಲಿ ತೋಟವನ್ನು ಮಾಡಿರುತ್ತಾರೆಯೇ? | |
| 12 | ಶಾಲೆಯಲ್ಲಿ ಗ್ರಂಥಾಲಯ ಪುಸ್ತಕಗಳನ್ನು ಮಕ್ಕಳಿಗೆ ಓದಲು ನೀಡುತ್ತಿದ್ದಾರೆಯೇ? ಪೋಷಕರಿಗೆ ಈ ಬಗ್ಗೆ ತಿಳಿಸಲಾಗಿದೆಯೇ | |

| | | |
|---|---|---|
| 13 | ಮಕ್ಕಳು ತಯಾರಿಸಿರುವ ಪ್ರಾಜೆಕ್ಟ್‌ಗಳನ್ನು ತರಗತಿಯಲ್ಲಿ ಪ್ರದರ್ಶಿಸಿರುತ್ತಾರೆಯೇ | |
| 14 | ಶಾಲಾ ಸಂಸತ್ ರಚನೆ ಮಾಡಲಾಗಿದೆಯೇ? ಹಾಗೂ ಕಾರ್ಯ ನಿರ್ವಹಣೆ ಮಾಡಲಾಗಿದೆಯೇ | |
| 15 | ಸಮುದಾಯದತ್ತ ಶಾಲೆ ಕಾರ್ಯಕ್ರಮ ಕುರಿತು ಅಭಿಪ್ರಾಯ | |
| | ಅ. ಏನಾದರೂ ವಿಶಿಷ್ಟ ಕಾರ್ಯಕ್ರಮಗಳನ್ನು ನಡೆಸಲಾಗಿದೆಯೇ? ವಿವರ ನೀಡಿ | |
| | ಆ. ಕಾರ್ಯಕ್ರಮ ನಡೆದ ಬಗ್ಗೆ ನಿಮ್ಮ ಅಭಿಪ್ರಾಯ | |

**ಮುಖ್ಯ ಶಿಕ್ಷಕರ ಸಹಿ**

**ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಾರ್ಗದರ್ಶಕರ/ಅಧಿಕಾರಿಗಳು ಸಹಿ**